ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 29–09–2020

## ಪತ್ರಿಕಾ ಪ್ರಕಟಣೆ

# ರೈತರ ಸಾಲ ಮನ್ನಾ ಕುರಿತು ಮಾಹಿತಿ ಪಡೆದ ಸಭಾಧ್ಯಕ್ಷರು

**ಬೆಂಗಳೂರು, ಸೆಪ್ಟೆಂಬರ್ 29 (ಕರ್ನಾಟಕ ವಾರ್ತೆ):**

ಸಭಾಧ್ಯಕ್ಷ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿಯವರು ತಮ್ಮ ಕಛೇರಿಯಲ್ಲಿ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್‌ರವರೊಂದಿಗೆ ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸಾಲ ಮನ್ನಾ ವಿಷಯದಲ್ಲಿ ಆಗಿರುವ ಗೊಂದಲಗಳನ್ನು ನಿವಾರಿಸುವ ದೃಷ್ಟಿಯಿಂದ ಸುಧೀರ್ಘ ಚರ್ಚೆ ನಡೆಸಿದರು. ಸಹಕಾರಿ ಕ್ಷೇತ್ರದ ಇನ್ನುಳಿದ ಸಮಸ್ಯೆಗಳ ಕುರಿತಂತೆಯೂ ಕೂಡ ಚರ್ಚಿಸಿದರು.

ಈ ಸಂದರ್ಭದಲ್ಲಿ ಸಚಿವ ಎಸ್.ಟಿ.ಸೋಮಶೇಖರ್ ರವರು ಸಕಾರಾತ್ಮಕವಾಗಿ ಸ್ಪಂದಿಸಿ, ಸಾಲ ತೆಗೆದುಕೊಂಡ ಎಲ್ಲಾ ರೈತರಿಗೂ ಸಾಲ ಮನ್ನಾ ಯೋಜನೆಯ ಫಲ ಸಿಗುವಂತೆ ನೋಡಿಕೊಳ್ಳುವುದಾಗಿ ಭರವಸೆ ನೀಡಿದರು. ದಿನಾಂಕ:26.09.2020ರಂದು ಸರ್ಕಾರ ಹೊರಡಿಸಿರುವ ಹೊಸ ಸುತ್ತೋಲೆಯಂತೆ ಜಿಲ್ಲಾ ಮಧ್ಯವರ್ತಿ ಬ್ಯಾಂಕ್‌ಗಳು ಹಾಗೂ ಸಹಕಾರಿ ಪ್ರಾಥಮಿಕ ಸಂಘಗಳು ಅಗತ್ಯ ಮಾಹಿತಿಗಳನ್ನು ನೀಡಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಹಕಾರಿ ಸಂಘಗಳ ನಿಬಂಧಕರಾದ ಜಿಯಾಉಲ್ಲಾ ಅವರು ಹಾಗೂ ಇತರೆ ಹಿರಿಯ ಅಧಿಕಾರಿಗಳು ಭಾಗಿಯಾಗಿದ್ದರು.

**ಛಾಯಾಚಿತ್ರ ಲಗತ್ತಿಸಿದೆ)**

# ತಿದ್ದುಪಡಿ

**ಬೆಂಗಳೂರು, ಸೆಪ್ಟೆಂಬರ್ 29 (ಕರ್ನಾಟಕ ವಾರ್ತೆ):**

ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕೆಲವು ಶುಲ್ಕಗಳು ಮತ್ತು ದೇಣಿಗೆಗಳ ನಿಯಂತ್ರಣ) ಕಾಯ್ದೆಗೆ ತಿದ್ದುಪಡಿ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕೆಲವು ಶುಲ್ಕಗಳು ಮತ್ತು ದೇಣಿಗೆಗಳ ನಿಯಂತ್ರಣ) ನಿಯಮಗಳು–1999ರ ಉಪ ನಿಯಮ 14ರಡಿ, ಅರ್ಜಿ ಶುಲ್ಕ ರೂ.5/–ನ್ನು ಮೀರತಕ್ಕದ್ದಲ್ಲ ಮತ್ತು ಕಿರುಹೊತ್ತಿಗೆ ಶುಲ್ಕವು ರೂ.20/–ನ್ನು ಮೀರತಕ್ಕದ್ದಲ್ಲ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಶಿಕ್ಷಣ ಸಂಸ್ಥೆಗಳು ವೆಬ್ ಸೈಟ್ www.schooleducation.kar.nic.in ಸಂಪರ್ಕಿಸಲು ಅಧಿಕೃತ ಪ್ರಕಟಣೆ ತಿಳಿಸಿದೆ.

# ಸಚಿವರ ಪ್ರವಾಸ

**ಬೆಂಗಳೂರು, ಸೆಪ್ಟೆಂಬರ್ 29 (ಕರ್ನಾಟಕ ವಾರ್ತೆ):**

ವಸತಿ ಸಚಿವ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಅವರು ಅಕ್ಟೋಬರ್ 3 ರಂದು ಕೊಡಗು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರ ಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ಗಾಂಧಿ ಜಯಂತಿ–ಸತ್ಯ ಮತ್ತು ಅಹಿಂಸಾ ಮಹೋತ್ಸವ

**ಬೆಂಗಳೂರು, ಸೆಪ್ಟೆಂಬರ್ 29 (ಕರ್ನಾಟಕ ವಾರ್ತೆ):**

ಮಹಾತ್ಮಗಾಂಧಿ ಜಯಂತಿ ಹಾಗೂ ಅಂತರಾಷ್ಟ್ರೀಯ ಅಹಿಂಸಾ ದಿನಾಚರಣೆಯ ಪ್ರಯುಕ್ತ ದೂರದರ್ಶನ, ಸರ್ವೋತ್ತಮ ಅಂತರಾಷ್ಟ್ರೀಯ ಸಂಸ್ಥೆ, ಕರ್ನಾಟಕ ವಿಭಾಗ, ರಾಜಭವನ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕರ್ನಾಟಕ ಸರ್ಕಾರ ಇವರು ಸಂಯುಕ್ತವಾಗಿ ಪ್ರಸ್ತುತ ಪಡಿಸುವ "ಗಾಂಧಿ ಜಯಂತಿ – ಸತ್ಯ ಮತ್ತು ಅಹಿಂಸಾ ಮಹೋತ್ಸವ" ಕಾರ್ಯಕ್ರಮವನ್ನು ಗ್ಲಾಸ್ ಹೌಸ್, ರಾಜಭವನ, ಬೆಂಗಳೂರಿನಲ್ಲಿ 2ನೇ ಅಕ್ಟೋಬರ್ 2020, ರಂದು ರಾಜ್ಯಪಾಲರು ಕರ್ನಾಟಕ ವಜುಭಾಯಿ ವಾಲಾ ಅವರು ಉದ್ಘಾಟಿಸಲಿದ್ದು ಸಂಜೆ 6–00 ರಿಂದ 7–00 ರವರೆಗೆ ಕಾರ್ಯಕ್ರಮವು ನಡೆಯಲಿದೆ.

ಸರ್ವಧರ್ಮಗಳ ಧಾರ್ಮಿಕ ಮುಖಂಡರ ದಿವ್ಯ ಸಾನಿಧ್ಯದಲ್ಲಿ ಮುಖ್ಯ ಅತಿಥಿಗಳಾಗಿ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಸಿ.ಟಿ.ರವಿ ಅವರು ಭಾಗವಹಿಸಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**Launching of Sanitation Literacy Campaign on 02 Oct 2020 – A NABARD Initiative**

Under Swacha Bharat Mission , NABARD has actively supported Government of India in construction of 3.29 crore household toilets by sanctioning and disbursing an amount of Rs 15,000 crore and Rs 12,298 crore respectively. Though India has been declared ODF free, we have moved to the next phase ODF+ where sustenance of the mission objective is of prime importance.

The COVID -19 pandemic has emphasized the need for maintaining good hygiene and sanitation both at community level as well as at individual level. NABARD has now decided to embark on a PAN India Sanitation Literacy Campaign to promote literacy on Wash products – Water, Sanitation and Hygiene by leveraging NABARD's rural reach through our partner agencies in our product areas.

We cordially invite you to the Launching of Sanitation Literacy Campaign on 02 Oct 2020. The programme will be inaugurated by Shri Javed Akthar, Additional Chief Secretary, Health, Govt. of Karnataka on 02 Oct 2020 at our Regional Office, No. 46 , NABARD Towers, K G Road Bangalore -560009 with simultaneous launching by the Deputy Commissioners and Chief Executive Officer (CEO), Zilla Panchayat of five select districts. The programme will commence at 10.30 AM and shall conclude by 12.30 PM. Further information can be had from 08022076484, 9880568229 Says official press release